# ರಾಜತಾಂತ್ರಿಕ ತಾರೆ




■ ಪ್ರವೀಣ ಕುಲಕರ್ಣಿ

'ಮಿಸ್ಟರ್ ಪ್ರೆಸಿಡೆಂಟ್, ಉಗ್ರರಿಗೆ ಮುಕ್ತ ವಾತಾವರಣ ಕಲ್ಪಿಸಿರುವ ಪಾಕಿಸ್ತಾನವು ಅಗ್ನಿಶಾಮಕ ವೇಷ ಧರಿಸಿಕೊಂಡು ಬೆಂಕಿಹಚ್ಚುವ ಕೆಲಸವನ್ನು ಮಾಡುತ್ತಿದೆ. ತನ್ನ ಹಿತ್ತಲಿನಲ್ಲಿ ಕುಖ್ಯಾತ ಭಯೋತ್ಪಾದಕ ಒಸಾಮಾ ಬಿನ್ ಲಾಡೆನ್‌ಗೆ ಆಶ್ರಯ ನೀಡುವ ಮೂಲಕ, ಇಡೀ ಜಗತ್ತು ತೊಂದರೆಗೆ ಸಿಲುಕುವಂತೆ ಮಾಡಿದೆ'

– ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾರತದ ಕಾರ್ಯದರ್ಶಿ, ಯುವ ಐಎಫ್‌ಎಸ್ ಅಧಿಕಾರಿ ಸ್ನೇಹಾ ದುಬೆ ಹೀಗೆ ಹೇಳುತ್ತಿದ್ದರೆ, ಇಡೀ ಸಭೆ ತದೇಕಚಿತ್ತದಿಂದ ಅವರ ಮಾತುಗಳನ್ನು ಕೇಳಿಸಿಕೊಳ್ಳುತ್ತಿತ್ತು. ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್, ತಮ್ಮ ಭಾಷಣದಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ್ದಕ್ಕೆ ಪ್ರತಿಯಾಗಿ ಈ ಯುವ ಅಧಿಕಾರಿ ಅದೇ ವೇದಿಕೆಯಲ್ಲಿ ತಿರುಗೇಟು ನೀಡಿದ ಪರಿ ಹಾಗಿತ್ತು.

ಐದೂವರೆ ನಿಮಿಷಗಳ ತಮ್ಮ ಭಾಷಣದಲ್ಲಿ ಸ್ನೇಹಾ ಅವರು ಒಂದೊಂದು ಪದವನ್ನೂ ಅಳೆದು, ಸುರಿದು ನೋಡಿ ಪ್ರಯೋಗಿಸುತ್ತಿದ್ದರು. ಉಚ್ಚಾರದ ಏರಿಳಿತದಲ್ಲಿ ಕೇಳುಗರ ಮೇಲೆ ಆ ಪದ ಯಾವ ಪರಿಣಾಮ ಬೀರಬೇಕೋ ಆ ಪರಿಣಾಮವನ್ನು ಬೀರಿಸಲೇಬೇಕು ಎಂಬ ಎಚ್ಚರಿಕೆಯನ್ನೂ ವಹಿಸಿದ್ದರು. ರಾಜತಾಂತ್ರಿಕ ಕಾರ್ಯವೇ ಹಾಗೆ. ದೇಶದ ಗೌರವವನ್ನು ಕಾಪಾಡಬೇಕು. ಕೇಳಿದ ಇತರರೂ ಅಹುದುಹುದು ಎನ್ನುವಂತೆ ಮಾತುಗಳು ಇರಬೇಕು. 'ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು, ನುಡಿದರೆ ಲಿಂಗ ಮೆಚ್ಚಿ ಅಹುದಹುದೆನಬೇಕು' ಎಂದು ಬಸವಣ್ಣ ಜನಸಾಮಾನ್ಯರನ್ನು ಉದ್ದೇಶಿಸಿಯೇ ಹೇಳಿದ್ದರೂ ರಾಜತಾಂತ್ರಿಕರ ನಡತೆ ಹೇಗಿರಬೇಕು ಎನ್ನುವುದಕ್ಕೆ ಈ ವಚನ ಒಂದು ರೀತಿಯಲ್ಲಿ ಚೌಕಟ್ಟಿನಂತಿದೆ. ಲಿಂಗ ಎನ್ನುವಲ್ಲಿ ಜಗ ಎಂದು ಓದಿಕೊಂಡರೆ ಸಾಕು!

'ಪಾಕಿಸ್ತಾನವು 'ಭಯೋತ್ಪಾದನೆಯ ಬಲಿಪಶು' ಎಂಬ ಮಾತನ್ನು ನಾವು ಕೇಳುತ್ತಲೇ ಇರುತ್ತೇವೆ. ಆದರೆ, ವಾಸ್ತವವಾಗಿ ಅದರ ನೀತಿಗಳಿಂದಾಗಿ ಇಡೀ ವಿಶ್ವವೇ ಸಂಕಷ್ಟಕ್ಕೆ ಸಿಲುಕಿದೆ. ಜಮ್ಮು ಮತ್ತು ಕಾಶ್ಮೀರ, ಲಡಾಖ್, ಕೇಂದ್ರಾಡಳಿತ ಪ್ರದೇಶಗಳು ಯಾವಾಗಲೂ ಭಾರತದ ಅವಿಭಾಜ್ಯ ಅಂಗ. ಪಾಕಿಸ್ತಾನವು ಅಕ್ರಮವಾಗಿ ಆಕ್ರಮಣ ಮಾಡಿಕೊಂಡಿರುವ ಪ್ರದೇಶಗಳನ್ನೂ ಅದು ಒಳಗೊಂಡಿದೆ' ಎಂದು ಸ್ನೇಹಾ, ಸಭೆಯಲ್ಲಿ ದಿಟ್ಟತನದಿಂದ ಹೇಳಿದರು. 'ಅಮೆರಿಕದ ಮೇಲೆ ಭಯೋತ್ಪಾದಕ ದಾಳಿಯ 20ನೇ ವರ್ಷಾಚರಣೆ ನಡೆಯಿತು. ದಾಳಿಯ ಮುಖ್ಯ ಸಂಚುಕೋರ ಲಾಡೆನ್‌ಗೆ ಪಾಕಿಸ್ತಾನ ಆಶ್ರಯ ನೀಡಿದ್ದನ್ನು ಯಾರೂ ಮರೆತಿಲ್ಲ. ಆದರೆ, ಲಾಡೆನ್‌ಗೆ ಪಾಕಿಸ್ತಾನವು ಈಗಲೂ ಹುತಾತ್ಮ ಗೌರವ ನೀಡುತ್ತಿದೆ' ಎಂದೂ ಚಾಟಿ ಬೀಸಿದರು. ಅವರ ಈ ಉತ್ತರ ಎಲ್ಲರ ಮೆಚ್ಚುಗೆಗೂ ಪಾತ್ರವಾಯಿತು.

ಸ್ನೇಹಾ, 2012ನೇ ಬ್ಯಾಚ್‌ನ ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಅಧಿಕಾರಿ. ಗೋವಾ ಮೂಲ. ಶಾಲೆಯನ್ನು ಓದಿದ್ದು ಅಲ್ಲಿಯೇ. ಪುಣೆಯ ಫರ್ಗ್ಯೂಸನ್ ಕಾಲೇಜಿನಲ್ಲಿ ಉನ್ನತ ವ್ಯಾಸಂಗ ಪೂರೈಸಿದ ಅವರು, ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ (ಜೆಎನ್‌ಯು) ಅಂತರರಾಷ್ಟ್ರೀಯ ಅಧ್ಯಯನ ವಿಷಯದಲ್ಲಿ ಎಂ.ಫಿಲ್. ಪದವಿ ಪಡೆದರು. 12ರ ಹರೆಯದ ಬಾಲಕಿ ಆಗಿದ್ದಾಗಿನಿಂದಲೇ ಅವರಿಗೆ ಐಎಫ್‌ಎಸ್ ಅಧಿಕಾರಿ ಆಗಬೇಕೆನ್ನುವ ಕನಸಿತ್ತು. 2011ರಲ್ಲಿ ಮೊದಲ ಪ್ರಯತ್ನದಲ್ಲೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ಸು ಗಳಿಸಿದರು. ಇತ್ತೀಚೆಗಷ್ಟೇ ಯುಪಿಎಸ್‌ಸಿ ಪರೀಕ್ಷೆಯಲ್ಲಿ ತೇರ್ಗಡೆಯಾದವರ ಪಾಲಿಗೆ ಇಂತಹ ಅಧಿಕಾರಿಗಳು ನಿಜಕ್ಕೂ ಮಾದರಿ.

ಸುತ್ತಾಟ ಎಂದರೆ ಸ್ನೇಹಾಗೆ ಪಂಚಪ್ರಾಣ. ಅಂತರರಾಷ್ಟ್ರೀಯ ವೇದಿಕೆಯಲ್ಲಿ ಕೆಲಸ ಮಾಡುವುದೆಂದರೆ ದೇಶದ ಗೌರವ ಹೆಚ್ಚಿಸಲು ಸಿಕ್ಕ ದೊಡ್ಡ ಅವಕಾಶ ಎನ್ನುವುದು ಅವರ ನಂಬಿಕೆ. ಸ್ನೇಹಾ ಅವರ ಕುಟುಂಬದಲ್ಲಿ ಇದುವರೆಗೆ ಯಾರೂ ಸರ್ಕಾರಿ ಆಡಳಿತ ಸೇವೆಗೆ ಸೇರಿರಲಿಲ್ಲ. ಅವರ ತಂದೆ ಬಹುರಾಷ್ಟ್ರೀಯ ಕಂಪನಿಯೊಂದರ ಉದ್ಯೋಗಿ, ತಾಯಿ ಶಿಕ್ಷಕಿಯಾಗಿದ್ದರು.

ತರಬೇತಿ ಮುಗಿಸಿದ ಬಳಿಕ ಸ್ನೇಹಾ ಅವರಿಗೆ ಸಿಕ್ಕ ಮೊದಲ ಹುದ್ದೆ ವಿದೇಶಾಂಗ ಸಚಿವಾಲಯದಲ್ಲಿ ಕಿರಿಯ ಅಧಿಕಾರಿಯದು. ಬಳಿಕ ಮ್ಯಾಡ್ರಿಡ್‌ನಲ್ಲಿರುವ ಭಾರತೀಯ ರಾಯಭಾರ ಕಚೇರಿಗೆ ವರ್ಗಾವಣೆಗೊಂಡರು. ಅಲ್ಲಿಂದ ಈಗ ವಿಶ್ವಸಂಸ್ಥೆಯಲ್ಲಿ ಭಾರತೀಯ ಅಧಿಕಾರಿಯಾಗಿ ಹೊಣೆ ಹೊತ್ತು ಬಂದಿದ್ದಾರೆ. ಪಾಕಿಸ್ತಾನದ ಪ್ರಧಾನಿಗೆ ಸಣ್ಣ ವಯಸ್ಸಿನ ಈ ಅಧಿಕಾರಿ ಕೊಟ್ಟ ದಿಟ್ಟ ಉತ್ತರಕ್ಕೆ ದೇಶದಾದ್ಯಂತ ಭಾರಿ ಮೆಚ್ಚುಗೆ ವ್ಯಕ್ತವಾಗಿದೆ. 'ಪಾಕಿಸ್ತಾನದ ಜೋಕರುಗಳ ಬಾಯಿ ಮುಚ್ಚಿಸಲು ಎಂತಹ ದಿಟ್ಟ ನಡೆ. ಪ್ರತಿಯೊಂದು ಪದವನ್ನೂ ಎಚ್ಚರಿಕೆಯಿಂದ ಆಯ್ಕೆ ಮಾಡಲಾಗಿದೆ. ವಾಸ್ತವಾಂಶಗಳನ್ನು ಮುಂದಿಡಲಾಗಿದೆ. ಅಬ್ಬಾ! ಎಂತಹ ಮೇಧಾವಿ' ಎಂದು ಸ್ನೇಹಾ ಅವರನ್ನು ಕೊಂಡಾಡಲಾಗಿದೆ.

ಪಾಕಿಸ್ತಾನದ ಉತ್ತರ ಕೊಡುವ ಹಕ್ಕನ್ನು ಬಳಸಿಕೊಂಡ ಆ ದೇಶದ ಅಂಧ ಅಧಿಕಾರಿ ಸೈಮಾ ಸಲೀಮ್ ಅವರೂ ತಮ್ಮ ಎಂಟು ನಿಮಿಷಗಳ ಬ್ರೈಲ್ ಲಿಪಿಯ ಭಾಷಣವನ್ನು ಒಂದಿನಿತೂ ತಡವರಿಸದೆ ಮುಗಿಸುವ ಮೂಲಕ ಜಗತ್ತಿನ ಗಮನಸೆಳೆದರು. ರಾಜತಾಂತ್ರಿಕ ಪರಿಭಾಷೆಯಲ್ಲಿ, ಈ ರೀತಿ ಘನಗಂಭೀರವಾಗಿ ವಿಷಯ ಪ್ರತಿಪಾದಿಸಿದ ಮೇಲೆ ಈ ಇಬ್ಬರೂ ಅಧಿಕಾರಿಗಳು ಕಾರಿಡಾರ್‌ನಲ್ಲಿ ಮುಖಾಮುಖಿಯಾಗಿ ಪರಸ್ಪರರ ಮಾತಿನ ವೈಖರಿಯನ್ನು ನೆನಪಿಸಿಕೊಂಡು ನಕ್ಕಿರಬೇಕು. ಇಂತಹ ಮೇಧಾವಿ ಅಧಿಕಾರಿಗಳು ರಾಜತಾಂತ್ರಿಕ ಪರಿಭಾಷೆಯಲ್ಲಿ ಶಬ್ದಾಡಂಬರದಿಂದ ಮಾತನಾಡುವುದಕ್ಕೆ ಮಾತ್ರ ಸೀಮಿತಗೊಳ್ಳದೆ ಗಡಿಯಲ್ಲಿ ಶಾಶ್ವತ ಶಾಂತಿ ನೆಲೆಸಲು ಕಾರಣವಾಗುವುದಾದರೆ ಅದೆಷ್ಟೊಂದು ಸೊಗಸು. ಮಾನವೀಯ ಸ್ಪರ್ಶದ ಅಂತಹ ರಾಜತಾಂತ್ರಿಕತೆಯೇ ನಮಗಿಂದು ಬೇಕಾಗಿರುವುದು, ಅಲ್ಲವೇ? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65